ದಿನಾಂಕಃ 12-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರ ವಕೀಲರಿಂದ,

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

1) ದಿನಾಂಕ 24.06.2022 ರಂದು ಪ್ರತಿವಾದಿ ನನ್ನ ಪರವಾಗಿ ಬರೆದುಕೊಟ್ಟಿರುವ ನೋಂದಾಯಿತವಲ್ಲದ ಕರಾರು ಪತ್ರವನ್ನು ಹಾಜರುಪಡಿಸುತ್ತೇನೆ (ಕರಾರು ಪತ್ರದ ಮೇಲೆ ನಿರ್ದಿಷ್ಟ ಶುಲ್ಕ ಮತ್ತು ದಂಡವನ್ನು ಪಾವತಿ ಮಾಡಿರುವುದರಿಂದ) ಸದರಿ ದಾಖಲೆಯನ್ನು ನಿಶಾನೆ.ಪಿ-01 ಎಂದು ಗುರುತಿಸಲಾಯಿತು.

2) ದಿನಾಂಕ 26.08.2022 ರಂದು ನಾನು ಪ್ರತಿವಾದಿಗಳಿಗೆ ವಕೀಲರ ಮೂಲಕ ಕಳುಹಿಸಿರುವ ತಿಳುವಳಿಕೆ ಪತ್ರದ ಪ್ರತಿಯನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು ನಿಶಾನೆ.ಪಿ-02 ಎಂದು ಗುರುತಿಸಲಾಯಿತು.

3) ನಾಲ್ಕು ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಗಳನ್ನು ನಿಶಾನೆ.ಪಿ-03 ರಿಂದ 06 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ